

ಮಗ ಶ್ರುತಿ ಸಾಗರ್, ಸೊಸೆ ಮೇಘಲಾ ಮತ್ತು ಮೊಮ್ಮಗ ಸಿದ್ಧಾಂತ್ ಜೊತೆ ಸುಂದರ ಕ್ಷಣಗಳು

ಇನ್ನಷ್ಟು ಬೆಳೆಸುವ ಕೆಲಸವನ್ನು ತರಗತಿಯಲ್ಲಿ ಮಾಡುತ್ತೇವೆ.

◆ **ಪ್ರಶಸ್ತಿ-ಸನ್ಮಾನಗಳ ಕುರಿತು ನಿಮ್ಮ ಅನಿಸಿಕೆ ಏನು?**

ಎಷ್ಟೋ ಕಡೆಗಳಲ್ಲಿ ಕಾರ್ಯಕ್ರಮದ ನಂತರ ಗ್ರೀನ್ ರೂಮ್‌ಗೆ ಬಂದು ಭೇಟಿಯಾಗುವ ಪ್ರೇಕ್ಷಕರು ಅಭಿನಂದನೆ ಸಲ್ಲಿಸುತ್ತಾರೆ. ಅದುವೇ ನನ್ನ ಮುಂದಿನ ನೃತ್ಯ ಪ್ರಸ್ತುತಿಗೆ ಪ್ರೇರಣೆ ಎನ್ನಬೇಕು. ಸಭಿಕರು ತಲ್ಲೀನರಾಗಿ ಒಂದು ಪ್ರಸ್ತುತಿಯನ್ನು ಆಸ್ವಾದಿಸುತ್ತಿದ್ದಾರೆ ಎಂದರೆ, ನಾವು ಅವರೊಡನೆ ಕಲಾಸಂವಾದ ಮಾಡುವುದು ಸಾಧ್ಯವಾಯಿತಲ್ಲಾ ಅನಿಸುತ್ತದೆ. ನನಗಿಂತ ದೊಡ್ಡವರು ಬಂದು ನಮಸ್ಕಾರ ಮಾಡುವಾಗ, ಕಣ್ಮುಚ್ಚಿ 'ದೇವರಿಗೆ ಸಮರ್ಪಣೆ' ಎಂದು ಹೇಳಿಕೊಳ್ಳುವೆ. ಇಂತಹ ಕ್ಷಣಗಳೇ ನನಗೆ ಪ್ರಶಸ್ತಿ. ಅದಕ್ಕೂ ಮಿಗಿಲಾಗಿ ಶಿಷ್ಯ ಸಮೂಹವು ನನ್ನನ್ನು ಗೌರವದಿಂದ ನಡೆಸಿಕೊಂಡಿದೆ. ಪ್ರಸ್ತುತ ಎಪ್ಪತ್ತೈದನೇ ವಯಸ್ಸಿನಲ್ಲಿ ಅಭಿನಂದಿಸುವ ಸಲುವಾಗಿ 500ಕ್ಕೂ ಹೆಚ್ಚು ಶಿಷ್ಯಂದಿರು ದೇಶ ವಿದೇಶದಿಂದ ಬಂದು 'ಮೈಸೂರು ಕಲಾದಿವಸ್' ಎಂಬ ಕಾರ್ಯಕ್ರಮ ಆಯೋಜಿಸಿ ಸಂಭ್ರಮಿಸಿದ್ದಾರೆ. ಇದಕ್ಕಿಂತ ಮಿಗಿಲಾಗಿ ಕಲಾವಿದೆಗೆ, ನೃತ್ಯಗುರುವಿಗೆ ಬೇರೇನು ಬೇಕು? ದಕ್ಷಿಣ ಕನ್ನಡದ ಮೂಡುಬಿದ್ರೆಯ ಮಗಳಾಗಿ, ಮೈಸೂರಿನ ಸೊಸೆಯಾಗಿ ನಾನು ಮಾಡಿದ ಕೆಲಸಗಳಿಗೆ ಗೌರವ ಸೂಚಿಸಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ ದೊರೆತಿದೆ. ಕರ್ನಾಟಕ ಕಲಾತಿಲಕ ಪ್ರಶಸ್ತಿ, ರಾಜ್ಯಸರ್ಕಾರ ಕೊಡುವ ನಾಟ್ಯರಾಣಿ ಶಾಂತಲಾ ಪ್ರಶಸ್ತಿ, ಸಂಘ ಸಂಸ್ಥೆಗಳ ವತಿಯಿಂದ, ಕಲಾವಿಮರ್ಶಕರ ಕಡೆಯಿಂದ ಅಭಿನಂದನೆಗಳು ಸಂದಿವೆ. ಅವೆಲ್ಲವೂ ನನ್ನ ಕಾಯಕವನ್ನು ಮುಂದುವರೆಸಲು ಪ್ರೇರಣೆಯಾಗಿವೆ.

●